## ಹೊಸ ವೈಫ್

ದಿನಪತ್ರಿಕೆ ಓದುತ್ತಿದ್ದೆ. ಅದರಲ್ಲಿನ ಒಂದು ಪುಟ್ಟ ಲೇಖನದ ಒಂದು ಸಾಲು ಗಮನ ಸೆಳೆಯಿತು. ಅದರಲ್ಲಿ 'ಒಂದೇ wifeನ್ನು ಹೆಚ್ಚು ದಿನ ಬಳಸಬಾರದು. ಆಗಾಗ ಬದಲಿಸುತ್ತಿರಬೇಕು' ಅಂತ ಇತ್ತು. ಇದನ್ನು ಎರಡೆರಡು ಬಾರಿ ಜೋರಾಗಿ ಓದಿದೆ. ಅದನ್ನು ಕೇಳಿಸಿಕೊಂಡ ನನ್ನ ಹೆಂಡತಿ ಅಡುಗೆಮನೆಯಿಂದ ಬಂದು, ಪೇಪರ್ ತೆಗೆದುಕೊಂಡು ಓದಿದಳು. ಅನಂತರ ಒಳಗೆ ಹೋಗಿ, ಕನ್ನಡಕ ತಂದು ನನ್ನ ಕಣ್ಣಿಗೆ ಸಿಕ್ಕಿಸಿ, 'ಈಗ ಓದಿ' ಎಂದಳು. ಮತ್ತೊಮ್ಮೆ ಓದಿದೆ. 'ಒಂದೇ knife ಅನ್ನು ಹೆಚ್ಚು ದಿನ ಬಳಸಬಾರದು. ಆಗಾಗ ಬದಲಿಸುತ್ತಿರಬೇಕು' ಅಂತ ಬರೆದಿತ್ತು!

**ವಿ. ಹೇಮಂತ ಕುಮಾರ್**





## ಕಾರ್ಡ್ ಸಾಕು

ನನ್ನ ತಮ್ಮ ಹಾಗೂ ತಮ್ಮನ ಹೆಂಡತಿ ಬ್ಯಾಂಕ್ ಉದ್ಯೋಗಿಗಳು. ಅವರ ಮಗಳು ಸ್ತುತಿ ತುಂಬಾ ಚೂಟಿ. ಏನೇ ಖರೀದಿಸಿದರೂ ಅಮ್ಮ ಅಪ್ಪ ಕಾರ್ಡ್ ಉಜ್ಜಿ ಹಣ ಪಾವತಿಸುವುದನ್ನು ಅವಳು ನೋಡಿದ್ದಳು. ಒಮ್ಮೆ ಅವರು ರಜೆಗೆಂದು ಎರಡು ದಿನ ನಮ್ಮ ಮನೆಗೆ ಬಂದಿದ್ದರು. ಲೋಕಾಭಿರಾಮ ಮಾತನಾಡುತ್ತ ಕುಳಿತಿದ್ದಾಗ ಮಕ್ಕಳ ಶಿಕ್ಷಣದ ಬಗ್ಗೆ ಮಾತು ಬಂತು. ನಾನು, 'ಅಯ್ಯೊ, ಈಗಿನ ಶಿಕ್ಷಣ ತುಂಬಾ ದುಬಾರಿ. ಮಗನಿಗೆ ಎಂಜಿನಿಯರಿಂಗೊ, ಮೆಡಿಕಲ್ಲೊ ಅಂತ ಓದಿಸಲು ಲಕ್ಷಾಂತರ ಹಣ ಬೇಕು' ಎಂದು ಹೇಳುತ್ತಿದ್ದೆ. ಸ್ತುತಿ, 'ದೊಡ್ಡಪ್ಪ, ಅದಕ್ಕೆ ಯಾಕೆ ಚಿಂತೆ ಮಾಡ್ತೀರಿ? ಈಗ ಯಾವುದಕ್ಕೂ ದುಡ್ಡು ಬೇಕಿಲ್ಲ, ಕಾರ್ಡ್ ಇದ್ರೆ ಮುಗಿತು' ಎಂದಳು.

**ಮಹೇಶ ಭರಡಿ**